"ಮಧುರ ಮಕ್ಕಳೇ- ನೀವೀಗ ಕವಡೆಯಿಂದ ವಜ್ರ ಸಮಾನರಾಗಿದ್ದೀರಿ, ಈಶ್ವರನ ಮಡಿಲನ್ನು ಪಡೆಯುವುದೇ ವಜ್ರ ಸಮಾನರಾಗುವುದಾಗಿದೆ, ಶ್ರೀಮತವು ನಿಮ್ಮನ್ನು ವಜ್ರ ಸಮಾನರನ್ನಾಗಿ ಮಾಡಿಬಿಡುತ್ತದೆ"

ಪ್ರಶ್ನೆ: ಸತ್ಯಯುಗದಲ್ಲಿ ಕೆಲವರಿಗಂತೂ ರಾಜ್ಯಭಾಗ್ಯ ಮತ್ತು ಇನ್ನೂ ಕೆಲವರಿಗೆ ದಾಸ-ದಾಸಿ ಅಥವಾ ಪ್ರಜಾ ಪದವಿಯು ಸಿಗುತ್ತದೆ, ಇದರ ಕಾರಣವೇನು?

ಉತ್ತರ: ಯಾರು ಈ ಸಂಗಮಯುಗದಲ್ಲಿ ಜ್ಞಾನಸಾಗರನ ವಿದ್ಯೆಯನ್ನು ಚೆನ್ನಾಗಿ ಓದುತ್ತಾರೆ ಮತ್ತು ಧಾರಣೆ ಮಾಡುತ್ತಾರೆ, ಜ್ಞಾನರತ್ನಗಳ ದಾನ ಮಾಡಿ ಅನೇಕರನ್ನು ತಮ್ಮ ಸಮಾನರನ್ನಾಗಿ ಮಾಡಿಕೊಳ್ಳುತ್ತಾರೆ ಅವರಿಗೆ ಸತ್ಯಯುಗದಲ್ಲಿ ರಾಜ್ಯಪದವಿ ಸಿಗುತ್ತದೆ ಮತ್ತು ಯಾರು ಹುಡುಗಾಟಿಕೆ ಮಾಡುತ್ತಾರೆ, ದೇಹಾಭಿಮಾನದಲ್ಲಿ ಬಂದು ಏರುಪೇರುಗಳನ್ನು ಮಾಡುತ್ತಾರೆ, ಅನೇಕ ತಪ್ಪುಗಳನ್ನು ಮಾಡುತ್ತಾರೆ ಅವರಿಗೆ ಪ್ರಜಾಪದವಿಯು ಸಿಕ್ಕಿಬಿಡುತ್ತದೆ. ವಿದ್ಯೆಯ ಮೇಲೆ ಗಮನ ಕೊಡದೆ ಇರುವವರೇ ದಾಸ-ದಾಸಿಯಾಗಿಬಿಡುತ್ತಾರೆ.

ಓಂ ಶಾಂತಿ. ಕವಡೆಯಿಂದ ವಜ್ರಸಮಾನರಾಗುವಂತಹ ಅಗಲಿಹೋಗಿ ಮರಳಿಸಿಕ್ಕಿರುವ ಪುರುಷಾರ್ಥಿ ಮಕ್ಕಳು ಇದನ್ನು ತಿಳಿದುಕೊಂಡಿದ್ದೀರಿ- ಮಾಯೆಯ ಬಿರುಗಾಳಿಗಳು ಬರುತ್ತವೆ. ಮಕ್ಕಳು ಕವಡೆಯಿಂದ ವಜ್ರಸಮಾನರಾಗುವ ಪುರುಷಾರ್ಥವನ್ನು ಮಾಡುತ್ತೀರಿ ಆದರೆ ಶ್ರೀಮತದನುಸಾರ ನಡೆಯದ ಕಾರಣ ಪುನಃ ಮಾಯೆಯ ಬಿರುಗಾಳಿಯಿಂದ ಜ್ಯೋತಿ ನಂದಿಹೋಗುತ್ತದೆ. ಇದರ ಮೇಲೂ ಸಹ ಗೀತೆಯಿದೆ. ಮಕ್ಕಳಿಗೆ ಈಗ ತಿಳಿದಿದೆ- ನಾವೇ ಪೂಜ್ಯ ದೇವಿ-ದೇವತೆಗಳಾಗಿದ್ದೆವು. ಇದನ್ನು ಆತ್ಮವು ಬೇಹದ್ದಿನ ಪ್ರಿಯಾತಿಪ್ರಿಯ ತಂದೆಯ ಮೂಲಕ ಕೇಳುತ್ತದೆ. ಅವರ ಮಹಿಮೆಯನ್ನೂ ಸಹ ಗಾಯನ ಮಾಡಲಾಗುವುದು. ಅವರು ಶ್ರೇಷ್ಠಾತಿಶ್ರೇಷ್ಠ ಭಗವಂತನಾಗಿದ್ದಾರೆ. ಇಡೀ ಸೃಷ್ಟಿಯಲ್ಲಿ ಅವರನ್ನೇ ನೆನಪು ಮಾಡುತ್ತಾರೆ ಏಕೆಂದರೆ ಈ ಪ್ರಪಂಚದಲ್ಲಂತೂ ಅವಶ್ಯವಾಗಿ ದುಃಖವೇ ದುಃಖವಿದೆ. ಎಲ್ಲಾ ಮನುಷ್ಯರೂ ಬುದ್ಧಿಹೀನರಾಗಿದ್ದಾರೆ ಎಂದಲ್ಲ. ಪ್ರಾಚೀನ ಭಾರತವು ಬಹಳ ಶ್ರೇಷ್ಠವಾಗಿತ್ತು ಮತ್ತೆಲ್ಲಾ ಖಂಡಗಳು ಅಥವಾ ಧರ್ಮಗಳಿರಲಿಲ್ಲ ಆದ್ದರಿಂದ ಭಾರತವನ್ನು ಪ್ರಾಚೀನವೆಂದು ಹೇಳುತ್ತಾರೆ ಎಂಬುದನ್ನೂ ಸಹ ತಿಳಿದುಕೊಳ್ಳುತ್ತಾರೆ. ಇಷ್ಟನ್ನಂತೂ ತಿಳಿದುಕೊಳ್ಳುತ್ತಾರೆ ಆದರೆ ಅದು ಹೇಗಾಯಿತು? ಯಾವಾಗ ಆಯಿತು? ಭಾರತವು ಮತ್ತೆ ವಜ್ರ ಸಮಾನ ಯಾವಾಗ ಮತ್ತು ಹೇಗಾಗುವುದು ಎಂಬುದನ್ನು ತಿಳಿದುಕೊಂಡಿಲ್ಲ. ಈಗ ನೀವು ಮಕ್ಕಳು ಸಮ್ಮುಖದಲ್ಲಿ ಕುಳಿತುಕೊಂಡಿದ್ದೀರಿ ಮತ್ತು ಯಾರು ಪರದೇಶ ಅರ್ಥಾತ್ ಹೊರಗಿನ ಸೇವಾಕೇಂದ್ರಗಳಲ್ಲಿ ಇರುತ್ತಾರೆಯೋ ಅವರೂ ಸಹ ಕೇಳುತ್ತಾರೆ. ವಜ್ರ ಸಮಾನರನ್ನಾಗಿ ಮಾಡುವ ಬೇಹದ್ದಿನ ತಂದೆಯು ತಿಳಿಸುತ್ತಾರೆ- ಇದು ನಿಮ್ಮ ಅಂತಿಮ ಈಶ್ವರೀಯ ಜನ್ಮವಾಗಿದೆ, ಯಾವಾಗ ಭಗವಂತನು ಕುಳಿತು ವಜ್ರಸಮಾನರನ್ನಾಗಿ ಮಾಡುವುದಕ್ಕಾಗಿ ನಿಮಗೆ ಓದಿಸುತ್ತಾರೆ ಅಂದಾಗ ಇಂತಹ ತಂದೆಗೆ ಎಷ್ಟೊಂದು ಗೌರವ ಕೊಡಬೇಕು. ಸತ್ಯತಂದೆ, ಸತ್ಯಶಿಕ್ಷಕ, ಸದ್ಗುರುವಿಗೆ ಗೌರವವನ್ನಿಡಲಾಗುತ್ತದೆ. ತಂದೆಯು ತಿಳಿಸುತ್ತಾರೆ- ಮಕ್ಕಳಿಗೆ ಸುಖವನ್ನು ಕೊಡುವವರು ನಾನೇ ಆಗಿದ್ದೇನೆ. ಈ ಸಮಯದಲ್ಲಿ ನೀವು ಮಕ್ಕಳಿಗೆ ಸುಖವನ್ನು ಕೊಡುವುದಕ್ಕಾಗಿ ಬಂದು ಮತವನ್ನು ಕೊಡುತ್ತೇನೆ. ಭಗವಂತನು ಯಾವ ಶ್ರೀಮತವನ್ನು ಕೊಟ್ಟಿದ್ದರು ಅದನ್ನು ಮನುಷ್ಯರು ಗೀತೆಯಲ್ಲಿ ಬರೆದುಬಿಟ್ಟಿದ್ದಾರೆ ಆದರೆ ಅದು ಯಥಾರ್ಥವಾಗಿಲ್ಲ. ಈಗ ಇವರು ನಿಮ್ಮನ್ನು ಶ್ರೇಷ್ಠಾತಿಶ್ರೇಷ್ಠ ವಜ್ರ ಸಮಾನರನ್ನಾಗಿ ಮಾಡುತ್ತಾರೆ. ಸ್ವರ್ಗದಲ್ಲಂತೂ ನೀವೇ ಬರುತ್ತೀರಲ್ಲವೆ. ಹಾಗೆ ನೋಡಿದರೆ ಇಡೀ ಪ್ರಪಂಚದ ಆತ್ಮರು ತಂದೆಯ ಮಕ್ಕಳೇ ಆಗಿದ್ದಾರೆ. ಪ್ರಜಾಪಿತ ಬ್ರಹ್ಮನಂತೂ ಇರುವರಲ್ಲವೆ. ಈ ಸಮಯದಲ್ಲಿ ಶಿವತಂದೆಯ ಮೊಮ್ಮಕ್ಕಳೆಂದು ಕರೆಸಿಕೊಳ್ಳುತ್ತೀರಿ ಮತ್ತೆ ಮೊಮ್ಮಕ್ಕಳು, ಮರಿಮಕ್ಕಳೆಂದೂ ಕರೆಸಿಕೊಳ್ಳುತ್ತೀರಿ. ವೃದ್ಧಿಯಾಗುತ್ತಾ ಹೋಗುತ್ತದೆಯಲ್ಲವೆ. ವಾಸ್ತವದಲ್ಲಿ ಎಲ್ಲರ ರಚಯಿತ ತಂದೆಯಾದ ನಾನೇ ಆಗಿದ್ದೇನೆ. ನಿಮಗೆ ಯಾರು ಜನ್ಮ ಕೊಟ್ಟರೆಂದು ಕೇಳುತ್ತಾರಲ್ಲವೆ ಅಂದಾಗ ನಮಗೆ ಅಲ್ಲಾ ಅಥವಾ ಖುದಾ ಜನ್ಮ ಕೊಟ್ಟರೆಂದು ಹೇಳುತ್ತಾರೆ. ಇಷ್ಟನ್ನಂತೂ ತಿಳಿಯುತ್ತಾರೆ ಆದರೆ ಹೇಗೆ ಜನ್ಮ ಕೊಡುತ್ತಾರೆ, ಹೇಗೆ ಇಷ್ಟೆಲ್ಲಾ ವೃದ್ಧಿಯನ್ನು ಪಡೆಯುತ್ತದೆ, ಏನನ್ನೂ ತಿಳಿದುಕೊಂಡಿಲ್ಲ. ಇದಂತೂ ನಿಮಗೆ ಗೊತ್ತಿದೆ- ಸತ್ಯಯುಗದಲ್ಲಿ ಬಹಳ ಕಡಿಮೆ ರಚನೆಯಿರುತ್ತದೆ. ಅವಶ್ಯವಾಗಿ ಹೊಸ ಪ್ರಪಂಚವನ್ನು ರಚಿಸುವ ರಚಯಿತನೂ ಸಹ ಯಾರಾದರೂ ಇರಬೇಕಲ್ಲವೆ. ಹೊಸ ಪ್ರಪಂಚದಲ್ಲಿ ದೇವಿ-ದೇವತಾ ಪದವಿಯನ್ನು ಪ್ರಾಪ್ತಿ ಮಾಡಿಸುತ್ತಾರೆಂದರೆ ಅವಶ್ಯವಾಗಿ ಹಳೆಯ ಪ್ರಪಂಚದ ವಿನಾಶವನ್ನೂ ಸಹ ಮಾಡಿಸುತ್ತಾರೆ. ಇದನ್ನು ಯಾರೂ ತಿಳಿದುಕೊಂಡಿಲ್ಲ. ಅನೇಕ ಗ್ರಂಥಗಳು, ಶಾಸ್ತ್ರಗಳನ್ನು ಬರೆಯುತ್ತಾರೆ. ಇವು ತತ್ವಜ್ಞಾನದ ಶಾಸ್ತ್ರಗಳೆಂದು ತಿಳಿಯುತ್ತಾರೆ. ತತ್ವಜ್ಞಾನಕ್ಕೆ ಜ್ಞಾನವೆಂದು ಹೇಳುತ್ತಾರೆ. ಆದರೆ ಜ್ಞಾನಸಾಗರ ಒಬ್ಬರೇ ಪರಮಪಿತ ಪರಮಾತ್ಮನೆಂದು ಯಾರಿಗೂ ಗೊತ್ತಿಲ್ಲ. ನೀವು ಆ ತಂದೆಯ ಮುಖಾಂತರ ಜ್ಞಾನವನ್ನು ಪಡೆದು ವಜ್ರಸಮಾನರಾಗುತ್ತೀರಿ. ಈಶ್ವರನ ಮಡಿಲನ್ನು ಪಡೆಯುವುದೇ ವಜ್ರಸಮಾನ ಜನ್ಮವಾಗಿದೆ. ವಜ್ರಸಮಾನರನ್ನಾಗಿ ಮಾಡುವ ತಂದೆ ನಮ್ಮನ್ನು ವಜ್ರಸಮಾನರನ್ನಾಗಿ ಮಾಡುತ್ತಿದ್ದಾರೆ. ಇವರ ಬಲಿಹಾರಿಯ ಗಾಯನವಿದೆ. ಸತ್ಯಯುಗದಲ್ಲಂತೂ ಬಲಿಹಾರಿಯ ಮಾತೇ

ಇರುವುದಿಲ್ಲ. ಅಲ್ಲಂತೂ ಈ ವಿಚಾರವೂ ಇರುವುದಿಲ್ಲ.

ನೀವೀಗ ತಿಳಿದುಕೊಂಡಿದ್ದೀರಿ- ನಾವೀಗ ಶೂದ್ರರೂ ಅಲ್ಲ, ದೇವತೆಗಳೂ ಅಲ್ಲ. ನಾವೀಗ ಬ್ರಾಹ್ಮಣರಾಗಿದ್ದೇವೆ. ನಿಮ್ಮನ್ನೇ ಸ್ವದರ್ಶನ ಚಕ್ರಧಾರಿಗಳೆಂದು ಕರೆಯಲಾಗುತ್ತದೆ. ಇಲ್ಲಿ ನೀವು ಸ್ವದರ್ಶನ ಚಕ್ರಧಾರಿಗಳಾಗಿ ವಿಷ್ಣುಕುಲದಲ್ಲಿ ಹೋಗಿ ರಾಜ್ಯ ಮಾಡುತ್ತೀರಿ. ಸ್ವದರ್ಶನ ಚಕ್ರಧಾರಿಗಳು, ಕಮಲಪುಷ್ಪ ಸಮಾನರು ನೀವು ಇಲ್ಲಿಯೇ ಆಗಬೇಕಾಗಿದೆ. ಪುರುಷಾರ್ಥ ಇಲ್ಲಿಯದಾಗಿದೆ, ಪ್ರಾಲಬ್ಧ ಅಲ್ಲಿಯದಾಗಿದೆ. ಇಂತಹ ಮಾತುಗಳನ್ನು ಪ್ರಪಂಚದಲ್ಲಿ ಯಾರೂ ಅರಿತುಕೊಂಡಿಲ್ಲ. ತಂದೆಯು ತಿಳಿಸುತ್ತಾರೆ- ಮಾಯೆಯು ನಿಮ್ಮನ್ನು ತುಚ್ಛಬುದ್ಧಿಯವರನ್ನಾಗಿ ಮಾಡಿಬಿಟ್ಟಿದೆ. ನೀವು ವಜ್ರಸಮಾನ ದೇವಿ-ದೇವತೆಗಳಾಗಿದ್ದಿರಿ. ಮೊದಲು ನಿಮಗೆ ಗೊತ್ತಿರಲಿಲ್ಲ. ಪ್ರಪಂಚದಲ್ಲಂತೂ ಅನೇಕ ಮತಗಳಿವೆ-ಕೆಲವರು ಕೆಲವೊಂದು ಮಾತುಗಳನ್ನು ಹೇಳುತ್ತಾರೆ. ಕೆಲವರು ಹೇಳುತ್ತಾರೆ ಮನುಷ್ಯರು ಸಾಯುತ್ತಾರೆ ನಂತರ ಹೊಸ ಜನ್ಮಪಡೆಯುತ್ತಾರೆ ಎಂದು. ಮತ್ತೆ ಕೆಲವರು ಹೇಳುತ್ತಾರೆ ಎಂತಹ ಸಂಕಲ್ಪ ಮಾಡುತ್ತಾರೆಯೋ ಆ ರೀತಿಯೇ ಆಗಿಬಿಡುತ್ತಾರೆಂದು. ಅನೇಕ ಪ್ರಕಾರದ ಮಾತನಾಡುವವರಿದ್ದಾರೆ. ನೀವು ಶ್ರೀಮತದನುಸಾರ ನಡೆಯುವವರಾಗಿದ್ದೀರಿ. ಶ್ರೀಮತದಿಂದ ನಿಮ್ಮದೂ ಸಹ ಶ್ರೇಷ್ಠಮತವಾಗುತ್ತದೆ. ಇದನ್ನು ನೀವೇ ತಿಳಿದುಕೊಂಡಿದ್ದೀರಿ, ಎಲ್ಲರೂ ತಿಳಿದುಕೊಳ್ಳುವುದಿಲ್ಲ. ಬಲೇ ಕೆಲವರು ಲಕ್ಷಾಧೀಶ್ವರರು, ಪದಮಾಪತಿಗಳಿದ್ದಾರೆ ಏಕೆಂದರೆ ಸಾಹುಕಾರರಿಗೆ ಬಹಳ ಅಭಿಮಾನವಿರುತ್ತದೆ. ಬಡವರೇ ಈಶ್ವರನ ಮಡಿಲನ್ನು ಪಡೆಯುತ್ತಾರೆ. ನಾಟಕದಲ್ಲಿ ಈ ರೀತಿಯೇ ನಿಗಧಿಯಾಗಿದೆ. ಈ ರಥವಂತೂ ಬ್ರಹ್ಮಾರವರದಾಗಿದೆಯಲ್ಲವೆ. ಬಾಪ್-ದಾದಾ ಇಬ್ಬರೂ ಒಟ್ಟಿಗೆ ಇದ್ದಾರೆ, ಇದನ್ನು ನೀವೇ ಅರಿತುಕೊಳ್ಳುತ್ತೀರಿ. ನಿರಾಕಾರ ಭಗವಂತನಿಗೆ ತನ್ನ ಶರೀರವಿಲ್ಲ ಆದ್ದರಿಂದ ಅವಶ್ಯವಾಗಿ ಈ ಶರೀರವನ್ನು ಲೋನ್ ಆಗಿ ಪಡೆಯಬೇಕಾಗುತ್ತದೆ ಆಗಲೇ ಭಗವಾನುವಾಚ ಆಗುವುದಲ್ಲವೆ. ಕೃಷ್ಣ ಭಗವಾನುವಾಚ ಆಗಲು ಸಾಧ್ಯವಿಲ್ಲ. ಅವರನ್ನಂತೂ ತಕ್ಷಣ ಎಲ್ಲರೂ ಅರಿತುಕೊಳ್ಳುತ್ತಾರೆ ಆದರೆ ಇವರು ನಿರಾಕಾರನಾಗಿದ್ದಾರೆ ಆದ್ದರಿಂದ ಇವರನ್ನು ಯಾರೂ ಅರಿತುಕೊಳ್ಳುವುದಿಲ್ಲ. ಇತ್ತೀಚೆಗೆ ಅನೇಕ ಮನುಷ್ಯರು ವೇಷವನ್ನು ಬದಲಾಯಿಸಿಕೊಂಡು ಕೃಷ್ಣನ ರೂಪವನ್ನು ಧಾರಣೆ ಮಾಡುತ್ತಾರೆ, ಹಣ ಸಂಪಾದಿಸುತ್ತಾರೆ. ಎಲ್ಲರೂ ಮಾಯೆಗೆ ಶಿಷ್ಯರಾಗಿಬಿಟ್ಟಿದ್ದಾರೆ. ನೀವೀಗ ಈಶ್ವರನ ಶಿಷ್ಯರಾಗುತ್ತೀರಿ. ಕೆಲವರಂತೂ 100% ಈಶ್ವರನ ಶಿಷ್ಯರಾಗಿದ್ದೀರಿ, ಅವರ ಆಶ್ರಯವನ್ನು ಪಡೆದಿದ್ದೀರಿ, ಉಳಿದವರೆಲ್ಲರೂ ಮಾಯಾರಾವಣನ ಆಶ್ರಯದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ತಂದೆಯು ತಿಳಿಸಿದ್ದಾರೆ- ವಿಶೇಷವಾಗಿ ಭಾರತವಾಸಿಗಳೆಲ್ಲರೂ ಶೋಕವಾಟಿಕೆಯಲ್ಲಿದ್ದಾರೆ, ಇಡೀ ಪ್ರಪಂಚವೇ ಲಂಕೆಯಾಗಿದೆ. ಮನುಷ್ಯರು ಶಾಸ್ತ್ರಗಳಲ್ಲಿ ಸೀಮಿತ ಮಾತುಗಳನ್ನು ಬರೆದುಬಿಟ್ಟಿದ್ದಾರೆ. ಬೇಹದ್ದಿನ ತಂದೆಯು ಬೇಹದ್ದಿನ ಮಾತುಗಳನ್ನು ತಿಳಿಸುತ್ತಾರೆ. ನಿಮಗೆ ಗೊತ್ತಿದೆ- ನಾವೀಗ ಈಶ್ವರನ ಮಡಿಲಿನಲ್ಲಿದ್ದೇವೆ ಮತ್ತೆ ನಾವು ಹೊಸಪ್ರಪಂಚದ ಮಾಲೀಕರು ದೇವಿ-ದೇವತೆಗಳಾಗುತ್ತೇವೆ. ಅಲ್ಲಂತೂ ಮಾಯೆಯಿರುವುದಿಲ್ಲ. ಸೂರ್ಯವಂಶಿ, ಚಂದ್ರವಂಶಿಗಳು ಬಹಳ ಸಾಹುಕಾರರಾಗಿರುತ್ತಾರೆ ಮತ್ತೆ ಯಾವಾಗ ವೈಶ್ಯವಂಶಿಯರಾಗುತ್ತಾರೆಯೋ ಆಗ ವಜ್ರ-ವೈಡೂರ್ಯಗಳ ಮಂದಿರಗಳನ್ನು ನಿರ್ಮಿಸುತ್ತಾರೆ. ಮೊಟ್ಟಮೊದಲು ಯಾರು ವಜ್ರ-ವೈಡೂರ್ಯಗಳ ಮಂದಿರಗಳನ್ನು ನಿರ್ಮಿಸುತ್ತಾರೆಯೋ ಅವರು ಇಂತಹ ಮಹಲುಗಳಲ್ಲಿರುತ್ತಾರೆ ಆದ್ದರಿಂದ ಭಾರತವು ವಜ್ರಸಮಾನವಾಗಿತ್ತು ಎಂದು ಗಾಯನ ಮಾಡಲಾಗಿದೆ. ಈಗಂತೂ ಕವಡೆಯ ಸಮಾನವಾಗಿದೆ, ಇದಂತೂ ಪತಿತ ಪ್ರಪಂಚವಾಗಿದೆ. ಭಾರತವು ಸತ್ಯಖಂಡವಾಗಿತ್ತು, ಭಾರತವೇ ಪತಿತ ಖಂಡವಾಗಿದೆ. ಭಾರತವನ್ನು ಈಗ ನಾವು ಪಾವನ ಎಂದು ಹೇಳುವುದಿಲ್ಲ. ನಾವೀಗ ಪಾವನರಾಗುತ್ತಿದ್ದೇವೆ. ಅಲ್ಲಂತೂ ಸಂಪೂರ್ಣ ನಿರ್ವಿಕಾರಿ ಪ್ರಪಂಚವಿರುತ್ತದೆ, ಕೃಷ್ಣನಿಗೆ ಎಷ್ಟೊಂದು ಮಹಿಮೆಯಿದೆ! ಕೃಷ್ಣನನ್ನು ಉಯ್ಯಾಲೆಯಲ್ಲಿ ತೂಗುತ್ತಾರೆ ಆದರೆ ಅವರ ಚರಿತ್ರೆಯನ್ನಂತೂ ತಿಳಿದುಕೊಂಡಿಲ್ಲ.

ಇದು ಕಲಿಯುಗವಾಗಿದೆ ಎಂದು ನೀವೀಗ ತಿಳಿದುಕೊಂಡಿದ್ದೀರಿ. ಭಾರತವೇ ಸತ್ಯಯುಗವಾಗಿತ್ತು ಅವಶ್ಯವಾಗಿ 84 ಜನ್ಮಗಳನ್ನೂ ಸಹ ಭಾರತವಾಸಿಗಳೇ ಪಡೆಯಲು ಸಾಧ್ಯ. ಯಾವಾಗ ನೀವು ಚೆನ್ನಾಗಿ ತಿಳಿಸುತ್ತೀರಿ ಆಗಲೇ ಒಪ್ಪುತ್ತಾರೆ. ಈ ಈಶ್ವರೀಯ ಮಡಿಲಿನಿಂದ ಭಾರತವು ವಜ್ರಸಮಾನವಾಗುತ್ತದೆ. ಯಥಾರಾಜ-ರಾಣಿ ತಥಾಪ್ರಜಾ. ಪ್ರಜೆಗಳನ್ನೂ ಸಹ ವಜ್ರಸಮಾನರೆಂದು ಹೇಳುತ್ತಾರೆ ಆದರೆ ಈಗ ಯಥಾರಾಜ-ರಾಣಿ ತಥಾ ಪ್ರಜಾ ಕವಡೆಯ ಸಮಾನರಾಗಿದ್ದಾರೆ. ಈಗ ವಜ್ರಸಮಾನರನ್ನಾಗಿ ಮಾಡುವಂತಹ ತಂದೆಯು ಬಂದಿದ್ದಾರೆ ಅಂದಾಗ ಪೂರ್ಣ ಪುರುಷಾರ್ಥ ಮಾಡಬೇಕಾಗಿದೆ. ವಜ್ರಸಮಾನರನ್ನಾಗಿ ಮಾಡುವಂತಹ ತಂದೆಯೊಂದಿಗೆ ಪೂರ್ಣ ಯೋಗವನ್ನಿಡಬೇಕಾಗಿದೆ. ಶಿವತಂದೆಯಿಂದ ನಾವು ವೈಕುಂಠದ ಮಾಲೀಕರಾಗುತ್ತಿದ್ದೇವೆ ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಎಲ್ಲವೂ ವಿದ್ಯೆಯ ಮೇಲೆ ಆಧಾರಿತವಾಗಿದೆ. ಎಲ್ಲರೂ ಓದುವಂತಹ ವಿಚಾರವನ್ನು ಮಾಡಬೇಕಲ್ಲವೆ. ಮನೆಯಲ್ಲಿ ಕೆಲಸ-ಕಾರ್ಯಗಳನ್ನು ಮಾಡುತ್ತಿದ್ದರೂ ಈ ರೀತಿ ತಿಳಿಯಬೇಕು- ನಾವು ಈಶ್ವರನ ವಿದ್ಯಾರ್ಥಿಗಳಾಗಿದ್ದೇವೆ. ನಮ್ಮ ವಿದ್ಯೆಯು ಬಹಳ ಸಹಜವಾಗಿದೆ. ಒಂದು ಗಳಿಗೆಯಾದರೂ ಬಂದು ಅವಶ್ಯವಾಗಿ ಕೇಳಬೇಕು. ಕೆಲವೊಮ್ಮೆ ಇಂತಿಂತಹ ಒಳ್ಳೊಳ್ಳೆಯ ವಿಚಾರಗಳು ಮುರಳಿಯಲ್ಲಿ ಬರುತ್ತವೆ. ಕೆಲವೊಂದು ಸಮಯದಲ್ಲಿ ಆಕಸ್ಮಾತ್ ಆಗಿಯೇ ಅನ್ಯರಿಗೆ ಬಾಣವು ನಾಟಿಬಿಡುತ್ತದೆ. ಮುರುಳಿಯನ್ನಂತೂ ಹೇಗಾದರೂ ಅವಶ್ಯವಾಗಿ ಕೇಳಲೇಬೇಕು. ಕೇಳಲು ಸಾಧ್ಯವಿಲ್ಲದಿದ್ದರೆ ಹೇಗಾದರೂ ಮಾಡಿ ಮುರಳಿಯನ್ನು ಓದಬೇಕಾಗಿದೆ. ಈ ಗುರಿಯನ್ನಿಟ್ಟುಕೊಂಡಾಗ ಎಲ್ಲವೂ ಪ್ರಬಂಧವಾಗುತ್ತದೆ. ಮೊದಲಂತೂ ಒಂದುವಾರ ಚೆನ್ನಾಗಿ ತಿಳಿದುಕೊಳ್ಳಬೇಕು ಮತ್ತೆ ಇನ್ನು ಹೊಸ-ಹೊಸ ವಿಷಯಗಳನ್ನು

ತಿಳಿದುಕೊಳ್ಳಲು ಅವಶ್ಯವಾಗಿ ಓದಲೂಬೇಕಾಗಿದೆ. ತಂದೆಯು ಓದಿಸುತ್ತಿರುತ್ತಾರೆ. ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಓದಲೂಬೇಕಾಗಿದೆ. ತಂದೆಯು ಓದಿಸುತ್ತಿರುತ್ತಾರೆ. ಅನೇಕ ವಿಷಯಗಳನ್ನು ತಿಳಿಸುತ್ತಿರುತ್ತಾರೆ ಅಂದಾಗ ಬೋರ್ಡಿನ ಮೇಲೂ ಸಹ ಬರೆಯಬೇಕು- ಸಹೋದರ-ಸಹೋದರಿಯರೇ ಬನ್ನಿ, ನಿಮ್ಮೆಲ್ಲರನ್ನೂ ಈ ಸಹಜಜ್ಞಾನ ಮತ್ತು ಸಹಜ ರಾಜಯೋಗದಿಂದ ವಜ್ರಸಮಾನರನ್ನಾಗಿ ಮಾಡುತ್ತೇವೆ. ನಿಮ್ಮ ಬಳಿಯಂತೂ ಚಿತ್ರಗಳೆಲ್ಲವೂ ಇದೆ. ಆ ಚಿತ್ರಗಳಲ್ಲಿ ತಿಳಿಸುವುದು ಬಹಳ ಸಹಜವಾಗಿದೆ. ಹೇಗೆ ಚಿಕ್ಕಮಕ್ಕಳಿಗೆ ಗೊಂಬೆಗಳನ್ನು ತೋರಿಸಿ ತಿಳಿಸಲಾಗುತ್ತದೆಯಲ್ಲವೆ- ಇದು ಆನೆ, ಇದು ಹೀಗೆ ಮಾಡುತ್ತದೆ, ಇದು ಒಂಟೆ...... ಎಂದು ಓದಿಸುತ್ತಾರೆ ಹಾಗೆಯೇ ಮನುಷ್ಯರಿಗೂ ಸಹ ಪರಮಾತ್ಮನ ಬಗ್ಗೆ ಗೊತ್ತಿಲ್ಲ ಮತ್ತು ಅವರು ಏನು ಮಾಡುತ್ತಾರೆ ಎಂಬುದೂ ಗೊತ್ತಿಲ್ಲ. ಅವರ ಕರ್ತವ್ಯವನ್ನೇ ಅರಿತುಕೊಂಡಿಲ್ಲ ಅಂದಮೇಲೆ ಇನ್ನೇನು ಮಹತ್ವ ಉಳಿಯಿತು? ಆದ್ದರಿಂದ ಚಿತ್ರಗಳನ್ನು ತೋರಿಸಿ ತಿಳಿಸಬೇಕಾಗುತ್ತದೆ- ಇವರು ಪರಮಪಿತ ಪರಮಾತ್ಮ ಶಿವಆಗಿದ್ದಾರೆ, ಇವರು ವಜ್ರಸಮಾನರನ್ನಾಗಿ ಮಾಡುವವರಾಗಿದ್ದಾರೆ. ಇವರಿಂದ ಬ್ರಹ್ಮಾರವರ ಮುಖಾಂತರ ಆಸ್ತಿಯು ಸಿಗುತ್ತದೆ. ಬ್ರಹ್ಮಾಕುಮಾರ-ಕುಮಾರಿಯರಿಗೆ ಶಿವತಂದೆಯು ಓದಿಸಿ ಇಂತಹ ದೇವಿ-ದೇವತೆಗಳನ್ನಾಗಿ ಮಾಡುತ್ತಾರೆ. ಅವರು ಓದಿಸುತ್ತಾರೆ ಆದ್ದರಿಂದಲೇ ನಾವು ತಿಳಿಸುತ್ತೇವೆ ಅಲ್ಲವೆ. ಮೊದಲು ಪರಮಪಿತ ಪರಮಾತ್ಮ ಬಂದು ಓದಿಸುತ್ತಾರೆ ಎಂಬುದನ್ನು ಅರಿತುಕೊಂಡಿರಲಿಲ್ಲ. ತಿಳುವಳಿಕೆಯಂತೂ ಬಹಳ ಸಹಜವಾಗಿದೆ. ಭಾರತವಂತೂ ವಜ್ರಸಮಾನವಾಗಿತ್ತು ಈಗಂತೂ ಕವಡೆಯ ಸಮಾನವಾಗಿದೆ. ಪುನಃ ಕವಡೆಯ ಹಿಂದೆ ಹೋಗಿ ಏಕೆ ಮೋಸಹೋಗುತ್ತೀರಿ? ಇದೆಲ್ಲವೂ ಧನ, ಸಂಪತ್ತು ಎಲ್ಲವೂ ಮಣ್ಣು ಪಾಲಾಗಲಿದೆ. ಈಗ ನೀವು ಸತ್ಯಖಂಡಕ್ಕಾಗಿ ಸತ್ಯ ಸಂಪಾದನೆಯನ್ನು ಮಾಡಿಕೊಳ್ಳಿ. ಪೂರ್ಣ ಸಂಪಾದನೆ ಮಾಡಿಕೊಳ್ಳದೆ ಇರುವಕಾರಣ ಸಂಪೂರ್ಣ ಸಾಧಾರಣ ಪ್ರಜೆಗಳಲ್ಲಿ ಹೊರಟುಹೋಗುತ್ತಾರೆ. ಪ್ರಜೆಗಳಿಗೂ ನೌಕರರಾಗಿಬಿಡುತ್ತಾರೆ. ತಂದೆಯ ಮಕ್ಕಳಾಗಿ ಮತ್ತೆ ತಂದೆಗೆ ವಿಚ್ಛೇಧನವನ್ನೇ ಕೊಟ್ಟುಬಿಡುತ್ತಾರೆ ಆದ್ದರಿಂದ ತಂದೆಯು ತಿಳಿಸುತ್ತಾರೆ- ಮಕ್ಕಳೇ, ಮನೆಯಲ್ಲಿಯೂ ಮುರುಳಿಯನ್ನು ತರಿಸಿ ಓದಬಹುದು. ಮುರುಳಿಯಂತೂ ಸಿಗುತ್ತದೆ. ಎಲ್ಲಿಯೇ ಇರಿ ನೀವಂತೂ ಅವಶ್ಯವಾಗಿ ಓದಬೇಕಾಗಿದೆ. ಓದಿ ಮತ್ತು ಅನ್ಯರಿಗೆ ಓದಿಸಿ. ವಿದೇಶದಲ್ಲಿದ್ದರೂ ನೀವು ಸೇವೆ ಮಾಡಬಹುದು. ತಂದೆಯ ಪರಿಚಯವನ್ನು ಕೊಡಬೇಕು. ಪ್ರಭಾವವಂತೂ ಅಂತ್ಯದಲ್ಲಿಯೇ ಬೀರುತ್ತದೆ. ಆಗ ತಿಳಿಯುತ್ತಾರೆ- ಅವಶ್ಯವಾಗಿ ಪ್ರಾಚೀನ ಭಾರತವು ಸ್ವರ್ಗವಾಗಿತ್ತು. ಎಷ್ಟೊಂದು ಹಣವನ್ನು ಇಲ್ಲಿಂದ ಲೂಟಿ ಮಾಡಿಕೊಂಡು ಹೋಗಿದ್ದಾರೆ !

ಸತ್ಯಯುಗದಲ್ಲಿ ಚೈತನ್ಯದಲ್ಲಿ ಇಡೀ ಸೃಷ್ಟಿಗೆ ನೀವು ಮಾಲೀಕರಾಗುತ್ತೀರಿ ಅಂದರೆ ರಾಜ್ಯ ಮಾಡುತ್ತೀರಿ ನಂತರ ಭಕ್ತಿಮಾರ್ಗದಲ್ಲಿ ಜಡಚಿತ್ರಗಳನ್ನು ಒಂದು ಕೋಣೆಯಲ್ಲಿಟ್ಟುಕೊಳ್ಳುತ್ತೀರಿ, ನೆನಪಾರ್ಥಗಳನ್ನಾಗಿ ಮಾಡುತ್ತೀರಿ. ಪೂಜಾಸಾಮಗ್ರಿಗಳಂತೂ ಬೇಕಲ್ಲವೆ. ನೀವೀಗ ಎಲ್ಲವನ್ನೂ ಅರಿತುಕೊಂಡಿದ್ದೀರಿ- ನಾವೆಲ್ಲರೂ ಪೂಜ್ಯರಾಗಿದ್ದೆವು ಈಗ ಪೂಜಾರಿಗಳಾಗಿಬಿಟ್ಟಿದ್ದೇವೆ. ಪೂಜ್ಯರಿಂದ ಪೂಜಾರಿಗಳಾಗುವುದರಲ್ಲಿ ನಮಗೆ ಎಷ್ಟು ಸಮಯ ಹಿಡಿಸುತ್ತದೆ? ಮಂದಿರಗಳು ಹೇಗಾಯಿತು? ನಾವೇ ಮಂದಿರಗಳನ್ನು ಮಾಡಿದ್ದೇವೆ. ನಾವು ನಮ್ಮ ಜಡಚಿತ್ರಗಳನ್ನು ಮಾಡಿ ನಮ್ಮದೇ ಪೂಜೆಯನ್ನು ಮಾಡಿದೆವು ಎಷ್ಟೊಂದು ಆಶ್ಚರ್ಯಕರ ಮಾತುಗಳಾಗಿವೆ. ತಂದೆಯು ತಿಳಿಸುತ್ತಾರೆ- ಮಕ್ಕಳೇ, ಈಗ ಯಾವುದೇ ತಪ್ಪನ್ನು ಮಾಡಬಾರದು. ಆತ್ಮಾಭಿಮಾನಿ ಆಗುವುದರಿಂದಲೇ ವಜ್ರಸಮಾನ ಆಗುತ್ತೀರಿ. ದೇಹಾಭಿಮಾನದಲ್ಲಿ ಬರಬಾರದು. ದೇಹಾಭಿಮಾನದಲ್ಲಿ ಬಂದು ಬಹಳ ಏರುಪೇರು ಮಾಡುತ್ತೀರೆಂದರೆ ತಮ್ಮದು ಸತ್ಯನಾಶ ಮತ್ತು ಅನ್ಯರದೂ ಸತ್ಯನಾಶ ಮಾಡುತ್ತೀರಿ. ಒಬ್ಬರೇ ಜ್ಞಾನಸಾಗರ ತಂದೆಯಿಂದ ಕೆಲವರು ಓದಿ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆ, ಇನ್ನೂ ಕೆಲವರು ದಾಸ-ದಾಸಿಯರಾಗುತ್ತಾರೆ. ನೋಡಿ, ಲಕ್ಷ್ಮೀ-ನಾರಾಯಣರು ಸ್ವರ್ಗದ ಮಾಲೀಕರಾಗಿದ್ದರು. ಅವರದು ಎಷ್ಟೊಂದು ಪೂಜೆ ಮತ್ತು ಮಹಿಮೆಯಾಗುತ್ತದೆ, ಮಂದಿರಗಳನ್ನು ಮಾಡುತ್ತಾರೆ. ಈಗ ನಿಮಗೆ ಗೊತ್ತಿದೆ- ನಾವೇ ಪೂಜ್ಯ ಸೂರ್ಯವಂಶಿ, ಲಕ್ಷ್ಮೀ-ನಾರಾಯಣರಾಗುತ್ತಿದ್ದೇವೆ ನಂತರ ಸೂರ್ಯವಂಶಿಯರಿಂದ ಚಂದ್ರವಂಶದಲ್ಲಿ ಬರುತ್ತೇವೆ. ರಾಜ್ಯಭಾಗ್ಯವನ್ನು ಪಡೆಯುವುದು ಎಷ್ಟೊಂದು ಶ್ರೇಷ್ಠಪದವಿ ಆಗಿದೆ. ಇಂತಹ ಪುರುಷಾರ್ಥ ಮಾಡಬೇಕು ಮತ್ತು ಮಾಡಿಸಬೇಕಾಗಿದೆ. ಒಂದುವೇಳೆ ಪುರುಷಾರ್ಥ ಮಾಡಿಸುವುದು ಗೊತ್ತಿಲ್ಲವೆಂದರೆ ಪುರುಷಾರ್ಥ ಮಾಡುವುದೇ ಕಲಿತಿಲ್ಲ ಎಂದರ್ಥ. ತಮ್ಮ ಸಮಾನರನ್ನಾಗಿ ಮಾಡಿಕೊಳ್ಳಲಿಲ್ಲವೆಂದರೆ ರಾಜ-ರಾಣಿಯರಾಗಲು ಸಾಧ್ಯವಿಲ್ಲ. ಅವಿನಾಶಿ ಜ್ಞಾನರತ್ನಗಳ ದಾನ ಮಾಡಬೇಕು. ಈ ನಶೆಯು ಕೆಲವರಿಗಷ್ಟೇ ಇರುತ್ತದೆ. ಆತ್ಮಾಭಿಮಾನಿ ಆಗುವುದರಿಂದ ಖುಷಿಯ ನಶೆಯೇರುವುದು. ಮಮ್ಮಾ-ಬಾಬಾರವರನ್ನು ನೋಡಿ ಎಷ್ಟೊಂದು ವಿಚಾರ ಮಾಡುತ್ತಾರೆ. ತಂದೆಗೆ ದಯೆ ಬರುತ್ತದೆ- ಈ ಮಗುವಿಗೆ ಪೆಟ್ಟು ಬೀಳುತ್ತದೆಯೆಂದರೆ ಹೇಗೆ ಪಾರಾಗಬಹುದು? ಆಶ್ರಯ ಕೊಡುವುದರಲ್ಲಿ ಎಷ್ಟೊಂದು ಏರುಪೇರುಗಳಿವೆ. ಸರ್ವಶಕ್ತಿವಂತ ಶಿವತಂದೆಯ ಮುಖಾಂತರ ಲಾಟರಿ ಸಿಗುತ್ತದೆ. ನೀವಿಲ್ಲಿ ಸಮ್ಮುಖದಲ್ಲಿ ಕೇಳುತ್ತೀರಿ, ಚೆನ್ನಾಗಿರುತ್ತದೆ. ತಂದೆಯು ಡೋಸ್ ಕೊಡುತ್ತಿರುತ್ತಾರೆ. ಮಕ್ಕಳು ಹೆಜ್ಜೆ-ಹೆಜ್ಜೆಯಲ್ಲಿಯೂ ಶ್ರೀಮತದಂತೆ ನಡೆಯಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸುಖ ಕೊಡುವ ತಂದೆ-ಶಿಕ್ಷಕ-ಸದ್ಗುರುವಿಗೆ ಅವಶ್ಯವಾಗಿ ಗೌರವ ಕೊಡಬೇಕಾಗಿದೆ. ಅವರ ಮತದನುಸಾರ ನಡೆಯುವುದೇ ಅವರಿಗೆ ಗೌರವ ಕೊಡುವುದಾಗಿದೆ.

2. ಮನೆಯ ಕೆಲಸ-ಕಾರ್ಯಗಳನ್ನು ಮಾಡುತ್ತಿದ್ದರೂ ಸ್ವಯಂನ್ನು ಈಶ್ವರನ ವಿದ್ಯಾರ್ಥಿಯೆಂದು ತಿಳಿಯಬೇಕಾಗಿದೆ. ವಿದ್ಯೆಯ ಮೇಲೆ ಪೂರ್ಣ ಗಮನ ಕೊಡಬೇಕು, ಮುರುಳಿಯನ್ನು ಎಂದೂ ತಪ್ಪಿಸಬಾರದಾಗಿದೆ. ಸತ್ಯಖಂಡಕ್ಕಾಗಿ ಸತ್ಯಸಂಪಾದನೆ ಮಾಡಿಕೊಳ್ಳಬೇಕಾಗಿದೆ.

ವರದಾನ: ಪಾಸ್ಟ್, ಪ್ರೆಸೆಂಟ್ ಮತ್ತು ಫ್ಯೂಚನ್ನು ತಿಳಿದುಕೊಂಡು ಮಾಯಾಜೀತರಾಗುವ ಮಾಸ್ಟರ್ ತ್ರಿಕಾಲದರ್ಶಿ ಭವ.

ಯಾವ ಮಕ್ಕಳು ಮೂರೂ ಕಾಲಗಳನ್ನು ತಿಳಿದಿರುತ್ತಾರೆಯೋ, ಅವರೆಂದಿಗೂ ಮಾಯೆಯಿಂದ ಸೋಲನ್ನನುಭವಿಸಲು ಸಾಧ್ಯವಿಲ್ಲ. ಏಕೆಂದರೆ ವರ್ತಮಾನ ಏನಾಗಿದೆ ಮತ್ತು ಭವಿಷ್ಯದಲ್ಲಿ ಏನಾಗುವುದಿದೆ, ಎರಡನ್ನೂ ತ್ರಿಕಾಲದರ್ಶಿ ಆತ್ಮನ ಬುದ್ಧಿಯಲ್ಲಿ ಸಷ್ಟವಾಗಿ ಇರುತ್ತದೆ. ಏನಾಗಿದ್ದೇನೆ ಮತ್ತು ಏನಾಗುವವನಿದ್ದೇನೆ, ವರ್ತಮಾನ ಮತ್ತು ಭವಿಷ್ಯವೆರಡೂ ಸಹ ಅವರಿಗೆ ನಶೆಯಿರುತ್ತದೆ. ಅದೇ ನಶೆಯೇ ಖುಷಿಯಲ್ಲಿ ಹಾರುತ್ತಿರುತ್ತಾರೆ, ಆದ್ದರಿಂದ ಅವರ ಕಾಲು ಧರಣಿಯಿಂದ ಮೇಲಿರುತ್ತದೆ. ಅವರು ದೇಹ, ದೇಹದ ಸಂಬಂಧ, ದೇಹದ ಹಳೆಯ ಪದಾರ್ಥಗಳ ಆಕರ್ಷಣೆಯಲ್ಲಿ ಬರುವುದಿಲ್ಲ.

ಸ್ಲೋಗನ್: ಯಾರ ಬಳಿ ಸರಳತೆಯ ಗುಣವಿದೆ, ಅವರಿಗಾಗಿ ಸಂಘಟನೆಯಲ್ಲಿ ನಡೆಯುವುದು ಬಹಳ ಸಹಜವಿದೆ.